


ರಾಮಸ್ವಾಮಿ ಎಂಬ ವ್ಯಕ್ತಿಯ ಸಾವಿನ ಸುತ್ತ ಕಟ್ಟಿರುವ ಈ ಮಾತಿನ ಮಂಟಪದಲ್ಲಿ ವ್ಯವಸ್ಥೆ, ರಾಜಕಾರಣ, ಬುದ್ಧಿಜೀವಿಗಳನ್ನು ವಿಡಂಬನೆ ಮಾಡುವ ಪ್ರಯತ್ನವಿದೆ.

■ ಗೌರಿ

# ರಮ್‌ಸ್ವಾಮಿಯ ರಾಮಾಯಣ!

ಒಂದು ಸಾವನ್ನು ಹಲವು ದೃಷ್ಟಿಕೋನಗಳಿಂದ ನೋಡುವ ಪ್ರಯತ್ನ ಸಿನಿಮಾ ಮಾಧ್ಯಮಕ್ಕೆ ಹೊಸತಲ್ಲ. ರಾಶೋಮನ್‌ನಿಂದ ಹಿಡಿದು ರಕ್ಷಿತ್ ಶೆಟ್ಟಿವರೆಗೆ ಇಂಥ ಹಲವು ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ ಕೆಲವು ಕ್ಲಾಸಿಕ್ ಎಂದು ಗುರ್ತಿಸಿಕೊಂಡಿವೆ ಕೂಡ. ಹೀಗೆ ಹಲವು ದೃಷ್ಟಿಕೋನಗಳನ್ನು ಬಿಂಬಿಸುವ ಪ್ರಯತ್ನವನ್ನು ಕಟ್ಟುವಾಗ ಗೊತ್ತಿಲ್ಲದೆಯೇ ಅದಕ್ಕೊಂದು ವರದಿಗಾರಿಕೆಯ ಗುಣ ಬಂದುಬಿಡುವ ಅಪಾಯ ಇರುತ್ತದೆ. ಜೊತೆಗೆ ಇನ್ನೊಂದು ಅಪಾಯವೂ ಇದೆ. ಅದು ನಿರ್ದೇಶಕ ಇವನ್ನೆಲ್ಲ ಎಲ್ಲಿ ನಿಂತು ನೋಡುತ್ತಿದ್ದಾನೆ, ಹಲವು ದೃಷ್ಟಿಕೋನಗಳ ಬಗ್ಗೆ ಅವನ ದೃಷ್ಟಿಕೋನ ಏನು ಎನ್ನುವುದಕ್ಕೆ ಸಂಬಂಧಿಸಿದ್ದು. ಈ ಹಲವು ದೃಷ್ಟಿಕೋನಗಳಲ್ಲಿ ನಿರ್ದೇಶಕ ಯಾವುದಾದರೂ ಒಂದು ದೃಷ್ಟಿಕೋನದಲ್ಲಿ ನಿಂತು ಉಳಿದವರನ್ನು ಅಲ್ಲಿಂದಲೇ ನೋಡಲು ಶುರುಮಾಡಿದರೆ ಅದೊಂದು ಮಿತಿಯಾಗುತ್ತದೆ. ವಸ್ತುನಿಷ್ಠತೆ ಹೊರಟು ಹೋಗುತ್ತದೆ.

ಎಸ್.ಜಿ. ಅಕ್ಷಯ್‌ಕುಮಾರ್ ನಿರ್ದೇಶನದ 'ಡೆತ್ ಆಫ್ ರಮ್‌ಸ್ವಾಮಿ' ಕಿರುಚಿತ್ರವೂ ಹೀಗೆ ಸತ್ತು ಹೋದ ವ್ಯಕ್ತಿಯೊಬ್ಬನನ್ನು ಹಲವು ಕಣ್ಣುಗಳಿಂದ ಕಟ್ಟಿಕೊಡುವ ಪ್ರಯತ್ನ. ಆದರೆ ಮೇಲೆ ಉಲ್ಲೇಖಿಸಿದ ಎರಡೂ ಅಪಾಯಗಳೂ ಈ ಕಿರುಚಿತ್ರದಲ್ಲಿ ಢಾಳಾಗಿಯೇ ಸಂಭವಿಸಿರುವುದರಿಂದ ಆ ಪ್ರಯತ್ನದಲ್ಲಿ ಅವರು ಅರ್ಧವಷ್ಟೇ ಯಶಸ್ವಿಯಾಗಿದ್ದಾರೆ.

**ಹೆಸರು:** ಡೆತ್ ಆಫ್ ರಮ್‌ಸ್ವಾಮಿ
**ನಿರ್ದೇಶನ:** ಎಸ್.ಜಿ. ಅಕ್ಷಯಕುಮಾರ್
**ನಿರ್ಮಾಣ:**ಸತ್ಯ ಪಿಕ್ಚರ್ಸ್, ಮಯೂರ ಮೋಷನ್ ಪಿಕ್ಚರ್ಸ್
**ಛಾಯಾಗ್ರಹಣ:** ಸೋಮ್ ಜಮಾದಾರ್
**ಸಂಗೀತ:** ಕೆವಿನ್
**ತಾರಾಗಣ:** ಮುನಿ, ಜಗದೀಶ್ ನಂದನಳ್ಳಿ, ಮಮತಾ ಜಿ., ಬೃಂದಾ ವಿಕ್ರಮ್



ಈ ಕಥೆಯ ಮುಖ್ಯಪಾತ್ರವಾದ ರಾಮಸ್ವಾಮಿ ಇಡೀ ಕಿರುಚಿತ್ರದಲ್ಲಿ ಕಾಣಿಸುವುದೇ ಇಲ್ಲ. ಅವನ ಮಗ ಹರಿ, ಪಬ್ಲಿಕ್ ಇಂಟೆಲೆಕ್ಚುವಲ್ ಸುನಂದಾ ಆರ್., ಹ್ಯೂಮನ್ ರೈಟ್ ಆ್ಯಕ್ಟಿವಿಸ್ಟ್ ಪವಿತ್ರಾ ರಾವ್, ಪೊಲೀಸ್ ಅಧಿಕಾರಿ ಚಂದ್ರಶೇಖರ್ ಅವರ ಮಾತುಗಳಲ್ಲಿ ರಾಮಸ್ವಾಮಿ ಕುರಿತು ವಿವರಗಳು ಸಿಗುತ್ತ ಹೋಗುತ್ತವೆ. ಎಲ್ಲರಿಗೂ ಅವರವರದೇ ಅಭಿಪ್ರಾಯವಿದೆ, ರಾಮಸ್ವಾಮಿಯ ಬಗ್ಗೆ, ಸಮಾಜದಲ್ಲಿ ಅವನ ಮಹತ್ವದ ಬಗ್ಗೆ, ವ್ಯವಸ್ಥೆಯ ಬಗ್ಗೆ. ರಾಮಸ್ವಾಮಿಯ ಮಗ ಹರಿ ತನ್ನಪ್ಪ ಮಹಾನ್ ಕುಡುಕ, ನಿಷ್ಪ್ರಯೋಜಕ ಎಂದು ಹೇಳಿದರೆ ಸುನಂದಾಗೆ ಅವನು ಮಹಾನ್ ಜನನಾಯಕನಾಗಿ ಕಾಣಿಸುತ್ತಿದ್ದಾನೆ. ಪವಿತ್ರಾಗೆ ಪೊಲೀಸ್ ಮೇಲೆ ಕೋಪ, ಸಸ್ಪೆಂಡ್ ಆಗಿರುವ ಪೊಲೀಸ್ ಅಧಿಕಾರಿ ಚಂದ್ರಶೇಖರ್‌ಗೆ ತಾನು ಹೇಗಾದರೂ ಈ ಪ್ರಕರಣದಲ್ಲಿ ನಿರಪರಾಧಿ ಎಂದು ಸಾಬೀತು ಮಾಡಿಕೊಳ್ಳುವ ತವಕ.

ರಾಮಸ್ವಾಮಿಯ ಸಾವನ್ನು ಇಟ್ಟುಕೊಂಡು ವ್ಯವಸ್ಥೆ, ಹೋರಾಟಗಾರರು, ಬುದ್ಧಿಜೀವಿಗಳು, ರಾಜಕಾರಣಿಗಳು, ಮಾಧ್ಯಮಗಳು ಎಲ್ಲವನ್ನೂ ವಿಡಂಬನೆ ಮಾಡುವ ನಿರ್ದೇಶಕರ ಪ್ರಯತ್ನ ಕೈಕೊಟ್ಟಿದೆ. ನಿರ್ದೇಶಕರು ಮಾತನ್ನಷ್ಟೇ ನೆಚ್ಚಿಕೊಂಡಿರುವ ನಿರೂಪಣಾ ತಂತ್ರವನ್ನು ಹಿಡಿದುಕೊಂಡಿದ್ದಾರೆ. ಆದರೆ ಆ ಮಾತುಗಳಿಗೆ ವಿಡಂಬನೆಯನ್ನಾಗಲಿ, ಘಟನೆಗಿರುವ ಹಲವು ಆಯಾಮಗಳನ್ನು ಬಿಚ್ಚಿಡುವ ಧ್ವನಿಶಕ್ತಿಯಾಗಲಿ ದಕ್ಕಿಲ್ಲ. ಹಾಗಾಗಿ ಹೋರಾಟಗಾರರು, ಬುದ್ಧಿಜೀವಿಗಳು, ರಾಜಕಾರಣಿಗಳನ್ನು ಕಾರ್ಟೂನಿನಂತೆ ನೋಡುವ ಚಪಲದ ಆಚೆಗೆ ಹೆಚ್ಚಿನದೇನನ್ನೂ ಈ ಕಿರುಚಿತ್ರ ಕಾಣಿಸುವುದಿಲ್ಲ. ಇಂದಿನ ಕಾಲದ ವಿದ್ಯಮಾನಗಳಿಗೆ ತುಸು ಕಣ್ತೆರೆದುಕೊಂಡಿದ್ದರೂ ಈ ಕಿರುಚಿತ್ರಕ್ಕೆ ವಿಡಂಬನೆಯ ಹರಿತಗುಣವಷ್ಟೇ ಅಲ್ಲ, ತಾಜಾತನವೂ ದಕ್ಕುವ ಸಾಧ್ಯತೆ ಇತ್ತು.

ಕಿರುಚಿತ್ರ ವೀಕ್ಷಣೆಗೆ
https://bit.ly/3rasKKn
ಕೊಂಡಿ/ಕ್ಯೂಆರ್ ಕೋಡ್ ಸ್ಯಾನ್ ಮಾಡಿ.